6) ಅಪಘಾತ ಮತ್ತು ಇತರೆ ದುರ್ಘಟನೆಯಿಂದ ನೊಂದ ರೋಗಿಗಳಿಗೆ ತುರ್ತು ಚಿಕಿತ್ಸೆಯನ್ನು ನೀಡಲು ಟ್ರಾಮಾ ಕೇರ್ ಸೆಂಟರ್‌ನ್ನು ಪ್ರಾರಂಭಿಸುವ ಬಗ್ಗೆ ಪ್ರಕ್ರಿಯೆ ನಡೆಯುತ್ತಿದೆ.

7) ಮಾನಸಿಕ ಆರೋಗ್ಯ ವಿಭಾಗ ವಿಸ್ತರಿಸಲು ಕಟ್ಟಡ ಕಾಮಗಾರಿಯ ಕೆಲಸ ನಡೆಯುತ್ತಿದೆ.

8) ಆಡಿಯೋ ಮೀಟರ್ ಉಪಕರಣ ಮತ್ತು ಸೌಂಡ್ ಪ್ರೂಫ್ ರೂಂ ನಿರ್ಮಾಣ ಪ್ರಕ್ರಿಯೆ ನಡೆಯುತ್ತಿದೆ.

9) ಮೆಡಿಕಲ್ ಐ.ಸಿ.ಯು. ವಿಭಾಗವನ್ನು ಪ್ರಾರಂಭಿಸಲಾಗಿದೆ.

10) ಆಧುನಿಕ, ಸುಸಜ್ಜಿತವಾದ ತುರ್ತು ವಾಹನವನ್ನು ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಅಧ್ಯಕ್ಷರು ಮತ್ತು ಸದಸ್ಯರ ನೇಮಕ

1110 (1139) ಶ್ರೀ ಧ್ರುವನಾರಾಯಣ ಆರ್. (ವಿಧಾನಸಭಾ ಸದಸ್ಯರು) (ಸಂತೇಮಾರಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳು ಎಷ್ಟು ತಿಂಗಳುಗಳಿಂದ ಖಾಲಿ ಇವೆ ;

ಆ) ಸದರಿ ಆಯೋಗಕ್ಕೆ ಅಧ್ಯಕ್ಷರು ಮತ್ತು ಸದಸ್ಯರನ್ನು ಎಷ್ಟು ದಿನದೊಳಗಾಗಿ ನೇಮಿಸಲಾಗುವುದು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):–

ಅ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಲ್ಲಿ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳು 1 ವರ್ಷ 4 ತಿಂಗಳುಗಳಿಂದ ಖಾಲಿ ಇವೆ.

ಆ) ಪ್ರಸ್ತುತ ದಿನಾಂಕ 10–07–2007 ರಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರನ್ನಾಗಿ ಡಾ॥ ಸಿ.ಎಸ್. ದ್ವಾರಕನಾಥ್, ವಕೀಲರು ಹಾಗೂ ಶ್ರೀ ಮಹಾಂತೇಶ್ ದೇವೇಂದ್ರಪ್ಪ ಪಾಟೀಲ್ ರವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ ಉಳಿದ ಸದಸ್ಯರನ್ನು ಶೀಘ್ರವಾಗಿ ನೇಮಿಸಲಾಗುವುದು.